ರೈತರ ಆವರ್ತನಿಧಿ

1379 (1844) - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರ ಆವರ್ತ ನಿಧಿಯನ್ನು ಸ್ಥಾಪಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಇದರ ಬಗೆಗಿನ ವಿವರಗಳೇನು;

ಇ) ರೈತರ ಆವರ್ತ ನಿಧಿಯಿಂದ ಈವರೆವಿಗೆ ಯಾವ ಯಾವ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದೆ;

ಈ) ರೈತರ ಆವರ್ತ ನಿಧಿಯಿಂದ ರೈತರಿಗೆ ಯಾವ ಪ್ರಯೋಜನ ಉಂಟಾಗಿದೆ ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ಕೃಷಿ ಮತ್ತು ತೋಟಗಾರಿಕೆ ಹುಟ್ಟುವಳಿಗಳ ಬೆಲೆ ಬೆಂಬಲ ಬೆಲೆಗಿಂತ ಕಡಿಮೆಯಾದಾಗ ಮಾರುಕಟ್ಟೆ ಮಧ್ಯೆ ಪ್ರವೇಶಿಸಿ ಬೆಂಬಲ ಬೆಲೆಗೆ ಖರೀದಿಸಲು ರೂ. 75.00 ಕೋಟಿಗಳ ಆವರ್ತನಿಧಿಯನ್ನು ಸ್ಥಾಪಿಸಿದೆ. ಇದಕ್ಕಾಗಿ ರಾಜ್ಯ ಸರ್ಕಾರವು ರೂ. 25.00 ಕೋಟಿ ಹಾಗೂ ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ರೂ. 50.00 ಕೋಟಿವಂತಿಗೆ ಪಾವತಿಸಲು ನಿಗಧಿಪಡಿಸಲಾಗಿದೆ.

ಇ) ಆಲೂಗಡ್ಡೆ, ತೊಗರಿ, ಕೊಬ್ಬರಿ (Ball copra) ಮೆಕ್ಕೆಜೋಳ, ರಾಗಿ, ಭತ್ತ, ಸಜ್ಜೆ ಹುಟ್ಟುವಳಿಗಳನ್ನು ಬೆಂಬಲ ಬೆಲೆ ಯೋಜನೆಯಡಿ ನಿಗಧಿಪಡಿಸಿರುವ ಖರೀದಿ ಸಂಸ್ಥೆಗಳ ಮೂಲಕ ಖರೀದಿಸಲು ಕ್ರಮ ಜರುಗಿಸಲಾಗಿದೆ.

ಈ) ಮಾರುಕಟ್ಟೆಯಲ್ಲಿ ಹಟ್ಟುವಳಿಗಳ ಧಾರಣೆ ಕುಸಿದಾಗ ಮಾರುಕಟ್ಟೆ ಪ್ರವೇಶಿಸಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರ ಹುಟ್ಟುವಳಿಗಳನ್ನು ಖರೀದಿಸಲು ಕ್ರಮ ಜರುಗಿಸಿರುವುದರಿಂದ ರೈತರ ಮನೋಸ್ಥೈರ್ಯ ಹೆಚ್ಚಿಸಲು ಮತ್ತು ಕನಿಷ್ಟ ಬೆಲೆಯನ್ನು ನೀಡಲು ಸಾಧ್ಯವಾಗಿದ್ದು ಹತಾಶ ಪರಿಸ್ಥಿತಿಯಿಂದ ಕಾಪಾಡಲು ಸಾಧ್ಯವಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಏತ ನೀರಾವರಿ ಕಾಮಗಾರಿಗಳ ಪ್ರಗತಿ.

1380 (1845) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಕೈಗೊಂಡಿರುವ ನೀರಾವರಿ ಕಾಮಗಾರಿಗಳ ವಿವರಗಳೇನು;

ಆ) ಈ ಏತ ನೀರಾವರಿ ಕಾಮಗಾರಿಗಳ ಪ್ರಗತಿಯ ವಿವರವೇನು;

ಇ) ಏತ ನೀರಾವರಿ ಕಾಮಗಾರಿಗಳಿಗೆ 2002-2003 ರಲ್ಲಿ ಅನುದಾನ ಕೊರತೆ ನಿವಾರಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ;